ಉಡುಪಿ ಜಿಲ್ಲಾ ಸಾರ್ವಜನಿಕ
ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿ
JUN 2016

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

ಸಂಖ್ಯೆ:4[10]ಆಂ.ಮಾ.ವಿ.ಅ.02/2016–17 ದಿನಾಂಕ: 06.05.2016

ಜ್ಞಾಪನ

ವಿಷಯ: ಉಡುಪಿ ಜಿಲ್ಲೆಯಲ್ಲಿ 8ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಉಡುಪಿ ಜಿಲ್ಲೆ ಇವರ ಪತ್ರ ಸಂಖ್ಯೆ:ಎ1ಪ್ರೌ.ಶಾ.ಆಂಗ್ಲ ವಿಭಾಗ–01/2015–16/178304, ದಿ:28/3/2016

**********

ಪ್ರಸ್ತಾವನೆ:–

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ, ರವರು ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸುತ್ತಾ, **ಅರ್ಬೆಟ್ಟು ವಾಮನ್ ಕಾಮತ್ ಫೌಂಡೇಶನ್ ಸರ್ಕಾರಿ ಪ್ರೌಢಶಾಲೆ ಸಂತೆಕಟ್ಟೆ–ಕಲ್ಲೂರು, ಬ್ರಹ್ಮಾವರ ವಲಯ, ಉಡುಪಿ ತಾ॥ ಮತ್ತು ಜಿಲ್ಲೆ.** ಈ ಶಾಲೆಯಲ್ಲಿ ಉತ್ತಮ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಈಗಾಗಲೇ ನಡೆಯುತ್ತಿರುವ ಕನ್ನಡ ಮಾಧ್ಯಮದ ಜೊತೆಯಲ್ಲಿ 8ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸಲು ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಆದೇಶ:–

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ, 2016–17ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ, **ಅರ್ಬೆಟ್ಟು ವಾಮನ್ ಕಾಮತ್ ಫೌಂಡೇಶನ್ ಸರ್ಕಾರಿ ಪ್ರೌಢಶಾಲೆ ಸಂತೆಕಟ್ಟೆ–ಕಲ್ಲೂರು, ಬ್ರಹ್ಮಾವರ ವಲಯ, ಉಡುಪಿ ತಾ॥ ಮತ್ತು ಜಿಲ್ಲೆ.** ಈ ಶಾಲೆಯಲ್ಲಿ ಈಗಾಗಲೇ ನಡೆಯುತ್ತಿರುವ ಕನ್ನಡ ಮಾಧ್ಯಮದ ಜೊತೆಯಲ್ಲಿ 8ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸಲು ಕೆಳಕಂಡ ಷರತ್ತಿಗೊಳಪಟ್ಟು ಪ್ರಾರಂಭಿಸಲು ಅನುಮತಿ ನೀಡಿದೆ.

ಷರತ್ತುಗಳು:–

1. **ಆಂಗ್ಲ ಮಾಧ್ಯಮ ವಿಭಾಗ ನೀಡುವುದರಿಂದ ಯಾವುದೇ ಕಾರಣಕ್ಕೂ ಕನ್ನಡ ಮಾಧ್ಯಮದ ತರಗತಿಗಳಲ್ಲಿ ಶೈಕ್ಷಣಿಕ ಪ್ರಗತಿ ಕುಂಠಿತವಾಗಬಾರದು.**
2. **ಮೇಲ್ಕಂಡ ಶಾಲೆಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಮತ್ತು ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳ ಪ್ರಗತಿಯನ್ನು ಪರಿಶೀಲಿಸಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ, ಜವಾಬ್ದಾರಿ ಸಂಬಂಧಿಸಿದ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ.**
3. **ಮೇಲ್ಕಂಡ ಶಾಲೆಯಲ್ಲಿ 10ನೇ ತರಗತಿಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿಭಾಗಗಳಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಜಿಲ್ಲಾವಾರು ಫಲಿತಾಶಕ್ಕಿಂತ ಕಡಿಮೆ ಬಂದಲ್ಲಿ ಮೇಲ್ಕಂಡ ಶಾಲೆಗಳಲ್ಲಿನ ಆಂಗ್ಲ ಮಾಧ್ಯಮ ಹೆಚ್ಚುವರಿ ವಿಭಾಗಗಳನ್ನು ರದ್ದುಪಡಿಸುವ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಕ್ರಮವಹಿಸುವುದು.**
4. **ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸುವ ಹಾಗೂ ನಿರ್ವಹಿಸುವ ಜವಾಬ್ದಾರಿ ಹೊರುವ ಬಗ್ಗೆ ಎಸ್‌ಡಿಎಂಸಿ ನಡಾವಳಿ ಕಡ್ಡಾಯವಾಗಿರುತ್ತದೆ.**
5. **ಶಾಲೆಯು ಮೂಲಭೂತ ಸೌಕರ್ಯಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು.**
6. **ಶಾಲೆಯಲ್ಲಿ ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಸಾರ್ವಜನಿಕ/ಎಸ್‌ಡಿಎಂಸಿ ಸಹಕಾರದಿಂದ ಅಭಿವೃದ್ಧಿಪಡಿಸಿಕೊಳ್ಳುವುದು.**
7. **ಸಾರ್ವಜನಿಕರಿಂದ ನೈಜ ದೂರು/ಆಕ್ಷೇಪಣೆಗಳಿದ್ದಲ್ಲಿ ಯಾವುದೇ ಕಾರಣಕ್ಕೂ ಶಾಲೆಯನ್ನು ಪ್ರಾರಂಭಿಸಬಾರದು.**
8. **ಕನ್ನಡ ಮತ್ತು ಆಂಗ್ಲ ಮಾಧ್ಯಮಗಳೆರಡರಲ್ಲೂ ಕನಿಷ್ಠ ದಾಖಲಾತಿ/ಹಾಜರಾತಿಯನ್ನು ಕಾಯ್ದುಕೊಳ್ಳತಕ್ಕದ್ದು.**
9. **ಹಾಲಿ ಇರುವ ಶಿಕ್ಷಕರೇ ಹೊಸದಾಗಿ ಪ್ರಾರಂಭಿಸಲಾಗುವ ಆಂಗ್ಲ ಮಾಧ್ಯಮ ತರಗತಿಗೆ ಪಾಠ ಬೋಧನೆ ಮಾಡತಕ್ಕದ್ದು.**
10. **ಹೊಸದಾಗಿ ಹೆಚ್ಚುವರಿ ಶಿಕ್ಷಕರ ಬೇಡಿಕೆ ಕೋರಬಾರದೆಂಬ ಬಗ್ಗೆ ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ರವರಿಂದ ಮುಚ್ಚಳಿಕೆ ಪತ್ರ ಪಡೆಯುವುದು.**
11. **ಮೇಲ್ಕಂಡ ಶಾಲೆಯಲ್ಲಿ 8ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸಿರುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗಬಾರದು.**

ನಿರ್ದೇಶಕರು [ಪ್ರೌಢ ಶಿಕ್ಷಣ]

ಪ್ರತಿಯನ್ನು,

1. ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ, ರವರಿಗೆ ಕಳುಹಿಸುತ್ತಾ, ಸದರಿ ಶಾಲೆಯ ಎಸ್.ಡಿ.ಎಂ.ಸಿ. ಮತ್ತು ಮುಖ್ಯ ಶಿಕ್ಷಕರು ಶಾಲೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಹೆಚ್ಚುವರಿಯಾಗಿ ಪ್ರಾರಂಭ ಮಾಡಲು ನೀಡಿರುವ ಷರತ್ತುಗಳ ಪೂರೈಕೆ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬ್ರಹ್ಮಾವರ ವಲಯ, ಉಡುಪಿ, ರವರಿಗೆ ಕಳುಹಿಸುತ್ತಾ, ಸದರಿ ಶಾಲೆಯ ಎಸ್.ಡಿ.ಎಂ.ಸಿ. ಮತ್ತು ಮುಖ್ಯ ಶಿಕ್ಷಕರು ಶಾಲೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಹೆಚ್ಚುವರಿಯಾಗಿ ಪ್ರಾರಂಭ ಮಾಡಲು ನೀಡಿರುವ ಷರತ್ತುಗಳ ಪೂರೈಕೆ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
3. ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ಹಾಗೂ ಅಧ್ಯಕ್ಷರು ಎಸ್.ಡಿ.ಎಂ.ಸಿ.
   - ಅರ್ಬೆಟ್ಟು ವಾಮನ್ ಕಾಮತ್ ಫೌಂಡೇಶನ್ ಸರ್ಕಾರಿ ಪ್ರೌಢಶಾಲೆ ಸಂತೆಕಟ್ಟೆ–ಕಲ್ಲೂರು, ಬ್ರಹ್ಮಾವರ ವಲಯ, ಉಡುಪಿ.
4. ಕಛೇರಿ ಪ್ರತಿ.

13/6/16

118010
15/06/16